ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ

ಕನ್ನಡ ಅಧ್ಯಯನ ವಿಭಾಗ

ಪಿಹೆಚ್.ಡಿ ಅಧ್ಯಯನ ವಿಷಯ

"ಜಂಬುನಾಥ ಕಂಚ್ಯಾಣಿ ಅವರ ಜೀವನ ಮತ್ತು ಸಾಹಿತ್ಯ"

ಪಿಹೆಚ್.ಡಿ. ಅಧ್ಯಯನಕ್ಕಾಗಿ ಸಲ್ಲಿಸುತ್ತಿರುವ ಪ್ರಬಂಧದ ಪೂರ್ವಭಾವಿ ಸಾರಲೇಖ

ಸಂಶೋಧನ ವಿದ್ಯಾರ್ಥಿನಿ

ಸತ್ಯಶ್ರುತಿ. ಎಂ.

ಮಾರ್ಗದರ್ಶಕರು

ಪ್ರೊ. ಮಹೇಶ ಚಿಂತಾಮಣಿ

ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ವಿಭಾಗ
ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

2018

ಜಂಬುನಾಥ ಕಂಚ್ಯಾಣಿಯವರ ಜೀವನ ಮತ್ತು ಸಾಹಿತ್ಯ

ಪರಿವಿಡಿ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ – ಒಂದು

ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಪರಂಪರೆ

ಅಧ್ಯಾಯ – ಎರಡು

ಜಂಬುನಾಥ ಕಂಚ್ಯಾಣಿ ಅವರ ಜೀವನ

೨.೧. ಜಂಬುನಾಥ ಕಂಚ್ಯಾಣಿಯವರ ಊರು, ಮನೆತನ, ಪರಿಸರ

೨.೨. ಜಂಬುನಾಥ ಕಂಚ್ಯಾಣಿಯವರ ಬಾಲ್ಯ ಮತ್ತು ಶಿಕ್ಷಣ

೨.೩. ಜಂಬುನಾಥ ಕಂಚ್ಯಾಣಿಯವರ ವೃತ್ತಿಜೀವನ

೨.೪ ಕೌಟುಂಬಿಕ ಜೀವನ

ಅಧ್ಯಾಯನ – ಮೂರು

ಜಂಬುನಾಥ ಕಂಚ್ಯಾಣಿಯವರ ಸಾಹಿತ್ಯ ಸೃಷ್ಟಿ ಒಂದು ಸಮಗ್ರ ನೋಟ

೩.೧. ಜಂಬುನಾಥ ಕಂಚ್ಯಾಣಿಯವರ ಮಕ್ಕಳ ಸಾಹಿತ್ಯ.

೩.೨. ಜಂಬುನಾಥ ಕಂಚ್ಯಾಣಿಯವರ ಪ್ರೌಢ ಸಾಹಿತ್ಯ

ಅಧ್ಯಾಯನ – ನಾಲ್ಕು

ಜಂಬುನಾಥ ಕಂಚ್ಯಾಣಿಯವರ ಮಕ್ಕಳ ಕವಿತೆಗಳು

೪.೧ ಜಂಬುನಾಥ ಕಂಚ್ಯಾಣಿಯವರ ಕವಿತೆಗಳ ವಸ್ತು ವೈವಿಧ್ಯ ಹಾಗೂ ಮಾನವೀಯ ಮೌಲ್ಯಗಳ ಹುಡುಕಾಟ

೪.೨ ಜಂಬುನಾಥ ಕಂಚ್ಯಾಣಿಯವರ ಕವಿತೆಗಳ ರಾಚನಿಕ ವೈಶಿಷ್ಟಗಳು

ಅಧ್ಯಾಯ – ಐದು

ಜಂಬುನಾಥ ಕಂಚ್ಯಾಣಿಯವರ ಮಕ್ಕಳ ಕಥಾಸಂಕಲನಗಳು ಮತ್ತು ಕಥನಕವನಗಳು

ಅಧ್ಯಾಯ – ಆರು

ಜಂಬುನಾಥ ಕಂಚ್ಯಾಣಿಯವರ ಮಕ್ಕಳ ಕಾದಂಬರಿಗಳು

೬.೧. ಜಂಬುನಾಥ ಕಂಚ್ಯಾಣಿಯವರ ಕಾದಂಬರಿಗಳ ವಸ್ತುವೈವಿಧ್ಯ

೬.೨ ಜಂಬುನಾಥ ಕಂಚ್ಯಾಣಿಯವರ ಕಾದಂಬರಿಗಳಲ್ಲಿ ಮೌಲ್ಯಪ್ರಜ್ಞೆ

ಅಧ್ಯಾಯನ – ಏಳು

೭.೧. ಜಂಬುನಾಥ ಕಂಚ್ಯಾಣಿಯವರ ವ್ಯಕ್ತಿಚಿತ್ರಗಳು ಮತ್ತು ಮಕ್ಕಳ ನಾಟಕ

ಅಧ್ಯಾಯನ – ಎಂಟು

ಜಂಬುನಾಥ ಕಂಚ್ಯಾಣಿಯವರ ಇತರೆ ಸಾಹಿತ್ಯ ಕೃತಿಗಳು

ಸಮಾರೋಪ

ಅನುಬಂಧಗಳು

೧) ವಂಶವೃಕ್ಷ

೨) ಜಂಬುನಾಥ ಕಂಚ್ಯಾಣಿ ಅವರ ಜೀವನದ ಪ್ರಮುಖ ಘಟನೆಗಳು

೩) ಜಂಬುನಾಥ ಕಂಚ್ಯಾಣಿ ಅವರ ಸಾಹಿತ್ಯ

೪) ಜಂಬುನಾಥ ಕಂಚ್ಯಾಣಿ ಅವರ ಭಾಗವಹಿಸಿದ ವಿಚಾರಗೋಷ್ಠಿಗಳು ಮತ್ತು ಕಮ್ಮಟಗಳು

೫) ಬಾನುಲಿ ಕಾರ್ಯಕ್ರಮಗಳು

೬) ಜಂಬುನಾಥ ಕಂಚ್ಯಾಣಿ ಅವರ ಪಡೆದ ಪ್ರಶಸ್ತಿಗಳು ಹಾಗೂ ಪುರಸ್ಕಾರಗಳು
೭) ಜಂಬುನಾಥ ಕಂಚ್ಯಾಣಿ ಅವರ ಶೈಕ್ಷಣಿಕ ಸೇವೆ ಮತ್ತು ಸಂಘ ಸಂಸ್ಥೆಗಳಲ್ಲಿ ಸದಸ್ಯತ್ವ
೮) ಪ್ರಶ್ನಾವಳಿ ಮಾದರಿ
೯) ಜಂಬುನಾಥ ಕಂಚ್ಯಾಣಿ ಅವರ ಹಸ್ತಾಕ್ಷರ
೧೦) ಬಾವಚಿತ್ರಗಳು
೧೧) ಗ್ರಂಥಋಣ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಮಗು ಮನುಜನ ತಂದೆ, ಮಾನವನ ಅಭ್ಯುದಯ ಬಾಲ್ಯವಸ್ಥೆಯನ್ನು ಅವಲಂಬಿಸಿದೆ. ಮಾನವ ಕುಲದ ಹುಟ್ಟು ಬೆಳವಣಿಗೆ, ಅಳಿವು ಉಳಿವುಗಳು ಬಾಲ್ಯಾವಸ್ಥೆಯಲ್ಲಿ ಅವನು ಪಡೆದ ಸಂಸಾರದ ಗಟ್ಟಿ ಪಾಯದ ಮೇಲೆ ನಿಲ್ಲುತ್ತದೆ. ಆದ್ದರಿಂದ ಆರೋಗ್ಯದಾಯಕವಾದ ಬಾಲ್ಯ ಬದುಕಿನ ಮುಸ್ಸಂಜೆಯನ್ನು ಸುಖ ಶಾಂತಿಯಿಂದ ಸಮೃದ್ಧಿಗೊಳಿಸುತ್ತದೆ. ಹೀಗೆ ಬದುಕನ್ನು ಸಮೃದ್ಧಗೊಳಿಸುವಲ್ಲಿ ಬಾಲ್ಯ ಜೀವನ ಹೇಗೆ ಮುಖ್ಯವೋ ಮಕ್ಕಳ ಸಾಹಿತ್ಯವೂ ಅಷ್ಟೇ ಮುಖ್ಯವಾಗುತ್ತದೆ.

ಮಕ್ಕಳ ಸಾಹಿತ್ಯವು ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿ ಅಸ್ತಿತ್ವ ಕಂಡುಕೊಂಡಿತು, ಅದಕ್ಕಿಂತ ಪೂರ್ವದಲ್ಲಿ, ಮಕ್ಕಳ ಸಾಹಿತ್ಯ ಜನಪದ ಕಥೆ, ಹಾಡು, ಒಗಟುಗಳಲ್ಲಿ ಹಾಗೂ ತಾಯಂದಿರ ಲಾಲಿ ಹಾಡುಗಳಲ್ಲಿ ಯಥೇಚ್ಛವಾಗಿ ದೊರೆಯುತ್ತಿತ್ತು ನಂತರ ಮಷಿನರಿಗಳ ಪ್ರಯತ್ನದಿಂದ ಪಠ್ಯ ಪುಸ್ತಕಗಳಲ್ಲಿ ಮಕ್ಕಳ ಸಾಹಿತ್ಯ ಎಡೆ ಪಡೆಯಿತು ನವೋದಯ ಕಾಲದಲ್ಲಿ ಪಂಜೆಮಂಗೇಶರಾಯ, ಹೊಯ್ಸಳರು, ಕುವೆಂಪು, ಬೇಂದ್ರೆ, ಕಾರಂತರಂಥ ಹಿರಿಯ ಸಾಹಿತಿಗಳು ಮಕ್ಕಳ ಸಾಹಿತ್ಯದಲ್ಲಿ ಕೃಷಿ ಮಾಡಿದರು. ಕ್ರಮೇಣ ಮಕ್ಕಳ ಸಾಹಿತ್ಯ ರಚನೆ ಮಾಡುವವರ ಸಂಖ್ಯೆ ಹೆಚ್ಚಾಗತೊಡಗಿತು, ಮಕ್ಕಳ ಸಾಹಿತ್ಯದಲ್ಲೂ ಕಥೆ, ಕಾವ್ಯ, ಪ್ರಬಂಧ ಕಾದಂಬರಿ, ನಾಟಕ, ಒಗಟುಗಳು ಮುಂತಾದ ಪ್ರಕಾರಗಳು ವ್ಯಾಪಕವಾಗಿ ಬೆಳೆದುಬಂದಿದ್ದರಿಂದ ಅದೊಂದು ಪರಿಪೂರ್ಣ ಸಾಹಿತ್ಯವೆಂದು ಮಾನ್ಯತೆ ಪಡೆಯಿತು.

ಮಕ್ಕಳ ಸಾಹಿತ್ಯವನ್ನು ವಿಶ್ವವಿದ್ಯಾಲಯ ಮಟ್ಟದಲ್ಲಿ ಅಧ್ಯಯನ ವಿಷಯವಾಗಿ ಆಯ್ಕೆ ಮಾಡುವಲ್ಲಿ ವಿಜಾಪೂರದ ಮಹಿಳಾ ವಿಶ್ವವಿದ್ಯಾಲಯ ಸುವರ್ಣಾವಕಾಶ ನೀಡಿದ್ದು, ಮಕ್ಕಳ ಸಾಹಿತ್ಯಕ್ಕೆ ಒದಗಿಸಿದ ಗೌರವವೆಂದು ಭಾವಿಸುವಂತಾಗಿದೆ. ಮಕ್ಕಳ ಸಾಹಿತ್ಯದ ತವರೂರು ವಿಜಾಪುರ ಜಿಲ್ಲೆ ಇಲ್ಲಿನ ಶಿಕ್ಷಕ ಸಾಹಿತಿಗಳು ಮಕ್ಕಳ ಸಾಹಿತ್ಯಕ್ಕೆ ಆಗಾಧ ಕೊಡುಗೆ ನೀಡಿದ್ದಾರೆ. ಈ ಜಿಲ್ಲೆಯ ಮಕ್ಕಳ ಸಾಹಿತಿಗಳು ಇಷ್ಟೆಲ್ಲಾ ಸಾಧನೆ ಮಾಡಿದ್ದರೂ ಅವರನ್ನು ಗುರುತಿಸುವ ಕಾರ್ಯ ನಡೆದದ್ದು ಅಲ್ಪ ಮಾತ್ರವೇ ಈ ಹಿನ್ನೆಲೆಯಲ್ಲಿ ವಿಜಾಪುರ ಜಿಲ್ಲೆಯ ಮಕ್ಕಳ ಸಾಹಿತ್ಯ ರಚನಾ ಪರಂಪರೆಯಲ್ಲಿ ಕಂಡುಬರುವ ಯುವ ಪ್ರತಿಭಾನಿತ ಲೇಖಕ ಜಂಬುನಾಥ ಕಂಚ್ಯಾಣಿಯವರು ಒಬ್ಬರಾಗಿದ್ದಾರೆ.

ಜಂಬುನಾಥ ಕಂಚ್ಯಾಣಿಯವರು ವಿಜ್ಞಾನ ಪದವೀಧರರು ಸಾಹಿತ್ಯದಲ್ಲಿ ಆಸಕ್ತಿ ಹೊಂದಿದವರು ಇವರು ಸುಮಾರು ಹತ್ತು ಕೃತಿಗಳನ್ನು ಮಕ್ಕಳಿಗಾಗಿ ರಚಿಸಿದ್ದಾರೆ. ಸುಮಾರು ೨೬ ವರ್ಷಗಳಿಂದ ಮಕ್ಕಳ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಮಕ್ಕಳ ಕವಿತೆಗಳು, ಕಥೆ, ಶಿಶುಪ್ರಾಸ, ವ್ಯಕ್ತಿ ಚಿತ್ರಗಳು, ಕಾದಂಬರಿಗಳನ್ನು ಅಷ್ಟೇ ಅಲ್ಲದೇ ಪ್ರೌಢ ಸಾಹಿತ್ಯದಲ್ಲೂ ಕೃಷಿ ಮಾಡಿದ್ದಾರೆ, ಇವರು ಸು ೩೪ ವರ್ಷಗಳವರೆಗೆ ವಿಜ್ಞಾನ ಶಿಕ್ಷಕರಾಗಿ, ಮುಖ್ಯೋಪಾಧ್ಯಾಯ (ಪ್ರೌಢಶಾಲೆ) ಸೇವೆ ಸಲ್ಲಿಸುತ್ತಿದ್ದಾರೆ, ವಿಜ್ಞಾನ ಶಿಕ್ಷಕರಾಗಿ ವಿಜ್ಞಾನದ ಜೊತೆಗೆ ಸಾಹಿತ್ಯಧ್ಯಾನ ಹಾಗೂ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿದ್ದು ಸಂತೋಷ ವಿಷಯ, ಒಬ್ಬ ಲೇಖಕನ ಜ್ಞಾನ ಪರಿಧಿ ಹೆಚ್ಚಿದಂತೆ ಉತ್ಕೃಷ್ಟ ಕೃತಿಗಳು ಸೃಷಿಯಾಗುತ್ತಿವೆ. ಸಾಹಿತ್ಯಕ್ಷ ವಿಜ್ಞಾನದ ಲೇಪನ ಅಥವಾ ವಿಜ್ಞಾನಕ್ಕೆ ಸಾಹಿತ್ಯದ ಮೆರುಗು ಇದರೆ ಬರಹ ಕಲಾತ್ಮಕವಾಗುತ್ತದೆ, ಅಲ್ಲದೇ ವೈವಿಧ್ಯವಾಗುತ್ತದೆ.

ಜಂಬುನಾಥ ಕಂಚ್ಯಾಣಿರವರನ್ನು ಕುರಿತು ಈ ವರೆಗೆ ಪತ್ರಿಕೆ, ಟಿ.ವಿಗಳಲ್ಲಿ ಸಂಕ್ಷಿಪ್ತವಾಗಿ ಪರಿಚಯಗಳು ಬಂದಿವೆ. ಆದರೆ ಇದನ್ನು ಹೊರತುಪಡಿಸಿ ಅವರ ಬದುಕು ಮತ್ತು ಸಾಹಿತ್ಯವನ್ನು ಕುರಿತು ಅಧ್ಯಯನ ನಡೆದಿಲ್ಲ ಇದನ್ನು ಗಮನಿಸಿ, ಎಲೆಮರೆಯ ಕಾಯಿಯಂತಿರುವ ಜಂಬುನಾಥರ ಬದುಕು ಮತ್ತು ಮಕ್ಕಳ ಸಾಹಿತ್ಯದ ಕುರಿತು ಸಂಪ್ರಬಂಧವನ್ನು ರಚಿಸಿ, ಮಕ್ಕಳ ಸಾಹಿತ್ಯದ ಯುವ ಬರಹಗಾರರಲೊಬ್ಬರಾದ ಜಂಬುನಾಥ ಅವರು ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ವಿವರವಾಗಿ ಪರಿಶೀಲನೆ ಮಾಡುವ ಉದ್ದೇಶವನ್ನಿರಿಸಿಕೊಳ್ಳಲಾಗಿದೆ.
ಈ ಮಹಾಪ್ರಬಂಧವು ೮ ಅಧ್ಯಾಯಗಳನ್ನು ಒಳಗೊಂಡಿದೆ.

ಪ್ರಸ್ತುತ ಅಧ್ಯಯನವು ಜಂಬುನಾಥ ಕಂಚ್ಯಾಣಿಯವರು ವಿಜಾಪುರ ಜಿಲ್ಲೆಯ ಮಕ್ಕಳ ಸಾಹಿತಿಗಳಲ್ಲಿ ಮೂರನೇಯ ತಲೆಮಾರಿನವರು ಇವರ ಸಂಕ್ಷಿಪ್ತ ಜೀವನ ಹಾಗೂ ಅವರ ಮಕ್ಕಳ ಸಾಹಿತ್ಯವನ್ನು ೮ ಅಧ್ಯಾಯಗಳಲ್ಲಿ ಪರಿಚಯಿಸಿಕೊಡಲಾಗಿದೆ.

"ಜಂಬುನಾಥ ಕಂಚ್ಯಾಣಿ ಅವರ ಜೀವನ ಮತ್ತು ಸಾಹಿತ್ಯ' ಎಂಬ ಅಧ್ಯಯನಕ್ಕೆ ಈ ಅಧ್ಯಾಯ ಪೂರ್ವ ಪೀಠಿಕೆಯನ್ನು ಒದಗಿಸುತ್ತದೆ, ಖ್ಯಾತ ಮಕ್ಕಳ ಸಾಹಿತಿ ಎಂದೇ ಕನ್ನಡಿಗರಿಗೆ ಪರಿಚಯವಿರುವ ಜಂಬುನಾಥ ಕಂಚ್ಯಾಣಿಯವರು ಮೂಲತಃ ಒಬ್ಬ ಪ್ರೌಢ ಸಾಹಿತ್ಯದ ಕವಿ, ಕತೆಗಾರ, ನಾಟಕ ಕಾರರಾಗಿದ್ದಾರೆ ಎಂಬುದನ್ನು ಎತ್ತಿ ತೋರಿಸುವ ಹಾಗೂ ಅವರ ಸಾಹಿತ್ಯದ ಗುಣಾತ್ಮಕತೆಯನ್ನು, ಮಕ್ಕಳ ಸಾಹಿತ್ಯದ ವಿಶೇಷತೆಯನ್ನು ಗುರುತಿಸುವ ಉದ್ದೇಶದಿಂದ ಈ ಅಧ್ಯಾಯವನ್ನು ಕೈಗೊಳ್ಳಲಾಗಿದೆ. ಇದರ ಜೊತೆಗೆ ಪ್ರಸ್ತುತ ಅಧ್ಯಯನದ ಗೊತ್ತುಗುರಿಗಳನ್ನು ಹಾಗೂ ವ್ಯಾಪ್ತಿಗಳ ಬಗೆಗೂ ಪೂರ್ವ ಪರಿಚಯ ನೀಡಲಾಗಿದೆ.

ಅಧ್ಯಾಯ – ಒಂದು
"ಮಕ್ಕಳ ಸಾಹಿತ್ಯ ಪರಂಪರೆ"

ಎಂಬ ಮೊದಲನೆಯ ಅಧ್ಯಾಯದಲ್ಲಿ ಮಕ್ಕಳ ಸಾಹಿತ್ಯ ಬೆಳೆದು ಬಂದು ಬಗೆಯನ್ನು ಕುರಿತು ಮಾಹಿತಿಯನ್ನು ನೀಡಲಾಗಿದೆ. ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಗುರುತಿಸಿಕೊಳ್ಳುವ ವೇದ ಉಪನಿಷತ್ತುಗಳಿಂದ ಹಿಡಿದು ಆಧುನಿಕ ಕನ್ನಡ ಸಾಹಿತ್ಯದವರೆಗೆ ಮಕ್ಕಳ ಸಾಹಿತ್ಯ ಬೆಳೆದು ಬಂದಿರುವದನ್ನು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ. ಅಧ್ಯಯನದ ಪ್ರಾರಂಭದಲ್ಲಿ ಪ್ರಪಂಚ ಹಾಗೂ ಭಾರತದಲ್ಲಿ ಮಕ್ಕಳ ಸಾಹಿತ್ಯ ಬೆಳೆದು ಬಂದ ಬಗೆಯನ್ನು ವಿವರಿಸಲಾಗಿದೆ. ನಂತರ ಆಧುನಿಕ ಕನ್ನಡ ಸಾಹಿತ್ಯ ಕಾಲದಲ್ಲಿ ಮಕ್ಕಳ ಸಾಹಿತ್ಯ ಬೆಳೆದು ಬಂದ ಬಗೆಯನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಮಕ್ಕಳ ಸಾಹಿತ್ಯದ ಇತಿಹಾಸ ಹುಟ್ಟುವ ಮಗುವಿನ ಅಳುವಿನೊಂದಿಗೆ ಇಲ್ಲವೆ ನಗುವಿನೊಂದಿಗೆ ಮಕ್ಕಳ ಸಾಹಿತ್ಯ ಹುಟ್ಟಿತೆನ್ನಬಹುದು, ಆದರೆ ಇದೊಂದು ಕಲ್ಪನೆಯ ಮಾತಾದರು. ಸಾಹಿತ್ಯದ ಇತಿಹಾಸ ಸನಾತನವೆನ್ನುವಷ್ಟು ಪುರಾತನವಾಗಿದೆ.

ಸಾಹಿತ್ಯವು ಮನಸ್ಸಿನ ಪರಿಶ್ರಮ ಮತ್ತು ಬುದ್ಧಿಯ ಚಮತ್ಕಾರ, ಬದುಕಿನ ಹೋರಾಟದೊಂದಿಗೆ ರೂಪ ಪಡೆಯುವುದು ಸಹಜವಾಗಿದೆ. ಆದರೆ ಮಕ್ಕಳ ಸಾಹಿತ್ಯವು ಮುಖ್ಯವಾಗಿ ಮಕ್ಕಳ ಎಳೆ ಮನಸ್ಸನ್ನು ಹಾಗೂ ಬುದ್ಧಿ ಭಾವನೆಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಿದ ಮನೋವೈಜ್ಞಾನಿಕ ಸಾಹಿತ್ಯವಾಗಿದೆ. ಈ ನಿಟ್ಟಿನಲ್ಲಿ ಮಕ್ಕಳ ಸಾಹಿತ್ಯದ ಹುಟ್ಟು ಮನಃಶಾಸ್ತ್ರ ಮತ್ತು ವೈಚಾರಿಕ ನಿಲುವುಗಳಲ್ಲಿ ರೂಪ ಪಡೆಯಿತೆಯಂದು ಹೇಳಬಹುದು.

ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಮೊಟ್ಟಮೊದಲಬಾರಿಗೆ ಉದಯವಾದದ್ದು ಕ್ರಿ.ಶ.೧೮೬೨ 'ಜಿಮ್ಯಾಕ್' ಎಂಬುವವರ 'ಬಾಲ ಗೀತೆಗಳು' ಎಂಬ ಶಿಶು ಗೀತೆಗಳು ಸಂಕಲನ ಮುದ್ರಿಸಿ ಪ್ರಕಟಿಸಿದರು, ಇದು ಕನ್ನಡದ ಮೊಟ್ಟಮೊದಲ ಮಕ್ಕಳ ಸಾಹಿತ್ಯ ಕೃತಿಯಾಗಿದೆ. ನಂತರ ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಸೃಷ್ಟಿ ಆರಂಭವಾಯಿತು.

ಚಿಕ್ಕ ಮಕ್ಕಳಿಗೋಸ್ಕರ – ಪಂಜೆಯವರು ಸಂವೇದನಾಶಿಲ ಮನಸ್ಸುಳ್ಳ ಕಾವ್ಯಗಳನ್ನು ರಚಿಸಿದ್ದಾರೆ. ಚಿಕ್ಕವರಿಗಾಗಿ ಸರಳ ಸುಂದರ ಕನ್ನಡ ಪಠ್ಯ ಪುಸ್ತಕಗಳನ್ನು ಕಥೆ, ಕವಿತೆಗಳನ್ನು ಬರೆದರು. ಅವೆಲ್ಲವೂ ಪ್ರಕಟವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಶಾಲೆಗಳಲ್ಲಿ ಬೋಧಿಸಲ್ಪಟ್ಟಿವೆ. ಇಂಥ ಕನ್ನಡ ಶಿಶು ಸಾಹಿತ್ಯವನ್ನು ಮೊದಲ ಬಾರಿಗೆ ಸೃಷ್ಟಿಸಿದವರು ಪಂಜೆಮಂಗೇಶರಾಯರು, ಅವರನ್ನು ಶಿಶು ಸಾಹಿತ್ಯದ ಜನಕರೆಂದು ಕರೆಯುತ್ತಾರೆ. ಪಂಜೆಯವರು ಮಕ್ಕಳ ಮನಸ್ಸು ಬುದ್ಧಿ ಭಾವನೆಗಳ ಬಗ್ಗೆ ವಿಚಾರ ಮಾಡಿ ಅವರಿಗೆ ಬೇಕಾದಂತಹ ಸಾಹಿತ್ಯ ರಚಿಸಿಕೊಟ್ಟರು.

ಆಧುನಿಕ ಪೂರ್ವ ಇತಿಹಾಸ, ಆಧುನಿಕ ಇತಿಹಾಸ, ಮಕ್ಕಳ ಸಾಹಿತ್ಯದ ಬೇರುಗಳು ಜನಪದ ಸಾಹಿತ್ಯದಲ್ಲಿ ಹರಡಿಕೊಂಡಿವೆ ತದನಂತರ ಮಕ್ಕಳ ಸಾಹಿತ್ಯದ ವ್ಯಾಪಕ ಬೆಳವಣಿಗೆಯನ್ನು ಗಂದಸ್ತ್ರ ಸಾಹಿತ್ಯದಲ್ಲಿ ಕಾಣುತ್ತೇವೆ.

ಹಳೆಗನ್ನಡ ಹಾಗೂ ನಡುಗನ್ನಡ ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯವನ್ನು ವಿರಳವಾಗಿ ಗುರುತಿಸಬಹುದಾಗಿದೆ. ಆಧುನಿಕ ಕನ್ನಡ ಸಾಹಿತ್ಯಕ್ಕಿಂತ ಮೊದಲು ದೊರೆಯುವ ಪೂರಾಣ ಹಾಗೂ ಮಹಾ ಕಾವ್ಯಗಳಲ್ಲಿ ಮಕ್ಕಳಿಗೆ ಇಷ್ಟವಾಗುವ ಅನೇಕ ಸನ್ನಿವೇಶಗಳು ಬರುತ್ತವೆ. ವಡ್ಡಾರಾಧನೆ ಪಂಚತಂತ್ರದಂಥ ಕೃತಿಗಳಲ್ಲಿ ಸಾಹಿತ್ಯದ ಆಯಗಳನ್ನು ಗುರುತಿಸಬಹುದು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ೯ನೇ ಶತಮಾನದಲ್ಲಿ ರಚಿತವಾದ ಕಥಾರುಪದ ಸೃಜನ ಸಾಹಿತ್ಯವೆಂದರೆ ವಡ್ಡಾರಾಧನೆ, ಇದರಲ್ಲಿ ಪೂರ್ವದ ಹಳೆಗನ್ನಡ ಭಾಷೆಯ ೧೯ ಕಥೆಗಳು ಇವೆ.

ಈ ಪೆಳ್ದ ಪತ್ತೊಂಬತ್ತ ಕಥೆಗಳು ಶಿವಕೋಟ್ಯಾಚಾರರ್ ಪೆಳಾರ್' ಎಂದು ಗ್ರಂಥ ಪರಿಸಮಾಪ್ತಿಯಲ್ಲಿ ಹೇಳಿದೆ ಇಲ್ಲಾ ಕಥೆಗಳು ಒಂದೇ ರೀತಿಯಲ್ಲಿ ಪ್ರಾರಂಭವಾಗುತ್ತವೆ.

ಇದರಲ್ಲಿ ಸುಕುಮಾರಸ್ವಾಮಿಯ ಕಥೆ, ವಿದ್ಯುಚ್ಚೊರನೆಂಬ ರಿಸಿಯ ಕಥೆ ಭದ್ರಬಾಹು ಭಟ್ಟಾರರ ಕಥೆ ಮುಂತಾದವುಗಳ ಕೆಲವು ಭಾಗಗಳು ಮಕ್ಕಳ ಕಥೆಗಳಾಗಿ ತೋರಿಬರುತ್ತವೆ.

ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಇತಿಹಾಸ ಒಂದು ಸಾವಿರ ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ. ಕ್ರಿ.ಶ.೧೧೩೧ರಲ್ಲಿ ದುರ್ಗಸಿಂಹ ರಚಿಸಿದ 'ಪಂಚತಂತ್ರ' ಎಂದ ಕೃತಿ ಇದಕ್ಕೆ ಉದಾಹರಣೆ. ಕನ್ನಡದಲ್ಲಿ ಮಕ್ಕಳ ಸಾಹಿತ್ಯಕ್ಕೆ ಸುದೀರ್ಘವಾದ ಇತಿಹಾಸವಿದೆ. ಮಕ್ಕಳ ಸಾಹಿತ್ಯದ ಬೇರುಗಳು ಜನಪದ ಸಾಹಿತ್ಯದಲ್ಲಿಯೆ ಸಿಗುತ್ತವೆ.

ಆಡಿ ಬಾ ನನ ಕಂದ ಅಂಗಾಲ ತೋಳದೇನ
ತೆಂಗಿನಕಾಯ ತಿಳಿನೀರ ತಕ್ಕೊಂಡು
ಬಂಗಾರದ ಮಾರಿ ತೋಳದೇನ॥

ಇಂಥ ತ್ರಿಪದಿಗಳು ಜನಪದ ಸಾಹಿತ್ಯವೆನಿಸಿದರೂ, ಮಕ್ಕಳ ಸಾಹಿತ್ಯದ ಬೇರುಗಳು ಜನಪದ ಸಾಹಿತ್ಯದಲ್ಲಿ ಹೇಗೆ ಸಿಗುತ್ತವೆ. ಎಂಬುದಕ್ಕೆ ನಿದರ್ಶನವೆನಿಸುತ್ತವೆ 'ಮಗು ಮನುಜನ ತಂದೆ' ಎಂಬುದು ಎಷ್ಟು ಸತ್ಯವಾದದ್ದೋ ಅಷ್ಟೇ ಸತ್ಯವಾದದು.

ಹಾಗೆಯೇ ಹನ್ನೆರಡನೇ ಶತಮಾನದ ವಚನ ಸಾಹಿತ್ಯದಲ್ಲಿ ಮಕ್ಕಳ ಓದಿಗೆ ತುಂಬಾ ಉಪಯುಕ್ತವಾದ ಆನೇಕ ವಚನಗಳು ಕಂಡು ಬರುತ್ತವೆ. ವಚನಕಾರರು ದೇಶೀ ಭಾಷೆಯಲ್ಲಿ ಸಾಹಿತ್ಯ ರಚಿಸಿ ಹೊಸ ಕ್ರಾಂತಿಯನ್ನು ಮಾಡಿದರು.

ನಂತರ ಕೀರ್ತನ ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯಕ್ಕೆ ಸಂಬಂಧಪಟ್ಟ ಅನೇಕ ಸಂಗತಿಗಳು ಕಂಡುಬರುತ್ತವೆ. ಪುರಂದರದಾಸರ 'ಗುಮ್ಮನ ಕರೆಯದಿರು' ಕೀರ್ತನೆ ಇದು ಒಂದು ಅಪ್ಪಟ ಮಕ್ಕಳ ಕವನ ಎನ್ನುವಂತಿದೆ.

ಗುಮ್ಮನ ಕರೆಯದಿರು ಅಮ್ಮ ನೀನು
ಗುಮ್ಮನ ಕರೆಯದಿರು //ಪ//
ಸುಮ್ಮನೆ ಇರುವೆನು, ಆಮ್ಮಿಯ ಬೇಡನು
ಮಮ್ಮು ಉಣ್ಣುತ್ತೇನೆ, ಅಮ್ಮ ಆಳುವುದಿಲ್ಲ.

ಈ ಒಂದು ಕವನ ಮಗುವಿನ ಕಿಡಿಗೇಡಿತನದ ಸುಂದರವಾದ ಚಿತ್ರಣ ಬಂದಿದೆ.

ಆಧುನಿಕ ಇತಿಹಾಸ

ಅಖಂಡ ಕನ್ನಡ ಸಾಹಿತ್ಯವನ್ನು ಬೇರೆ – ಬೇರೆ ಕಾಲಘಟ್ಟಗಳ ಅಧ್ಯಯನದ ಅನುಕೂಲತೆಗಾಗಿ ವಿಭಾಗಿಸಿಕೊಂಡಿರುವಂತೆ : ಮಕ್ಕಳ ಸಾಹಿತ್ಯವನ್ನು ನನ್ನ ಅಧ್ಯಯನ ಅನುಕೂಲತೆಗೋಸ್ಕರ ಮೂರು ಪಟ್ಟಿಗಳನ್ನಾಗಿ ವಿಂಗಡಿಸಿಕೊಂಡಿದ್ದೇನೆ. ಏಕೆಂದರೆ ನಮ್ಮ ಸಾಹಿತ್ಯ ಪ್ರಕಾರಗಳು ವಿದೇಶಿಯರ ಪ್ರಭಾವಕ್ಕೊಳಗಾಗಿ ಬೆಳೆದು ಬಂದಿದೆ. ಇದಕ್ಕೆ ಸಮಾನಂತರವಾಗಿ ಅಂದಿನ ಅಗತ್ಯಗಳಿಗೆ ಅನುಗುಣವಾಗಿ ಕನ್ನಡದಲ್ಲಿ ಮಕ್ಕಳ ಸಾಹಿತ್ಯ ರೂಪಗೊಳ್ಳುತ್ತ ಬಂದಿದೆ. ಈ ಅವಧಿಯಲ್ಲಿ ಸೃಷ್ಟಿಯಾದ ಮಕ್ಕಳ ಸಾಹಿತ್ಯವನ್ನು ಮೂರು ಘಟ್ಟಗಳನ್ನಾಗಿ ವಿಂಗಡಿಸಲಾಗಿದೆ.

೧) ಪ್ರಥಮ ಘಟ್ಟ (೦ಿಂದ ೬ ವರ್ಷದ ಮಕ್ಕಳಿಗಾಗಿ) ೧೮೫೦–೧೯೪೭

೨) ದ್ವಿತೀಯ ಘಟ್ಟ(೬ ರಿಂದ ೯ ವರ್ಷದ ಮಕ್ಕಳಿಗಾಗಿ ೧೯೪೭–೧೯೭೦

೩) ತೃತೀಯ ಘಟ್ಟ (೯ ರಿಂದ ೧೪ ವರ್ಷದ ಮಕ್ಕಳಿಗಾಗಿ) ೧೯೭೦–ಈಚೆಗೆ ಎಂದು ವಿಭಾಗ ಮಾಡಿಕೊಂಡು ಕಾಲಘಟ್ಟದಲ್ಲಿ ಪ್ರಮುಖ ರಚನೆಕಾರರ ಸಾಹಿತ್ಯವನ್ನು ಕೊಟ್ಟ ಕೊಡುಗೆಯನ್ನು ವಿವರಿಸಬಹುದು.

ಅಧ್ಯಯ – ಎರಡು

ಜಂಬುನಾಥ ಕಂಚ್ಯಾಣಿಯವರ ಜೀವನ'

ಈ ಅಧ್ಯಾಯದಲ್ಲಿ ಜಂಬುನಾಥ ಕಂಚ್ಯಾಣಿ'ಯವರ ಬದುಕಿನ ವಿವಿಧ ಹಂತಗಳನ್ನು ಚಿತ್ರಿಕರಿಸಲಾಗಿದೆ. ವಿಜಾಪುರ, ಜಿಲ್ಲಾ ಸಾಂಸ್ಕೃತಿಕ, ಸಾಹಿತ್ಯ ಪರಿಸರದ ಪರಿಚಯದಿಂದ ಹಿಡಿದು, ಜಂಬುನಾಥರವರ ಗ್ರಾಮ ಪರಿಚಯದ ಹಿನ್ನಲೆಯೊಂದಿಗೆ ಪ್ರಾರಂಭವಾದ ಈ ಅಧ್ಯಾಯ ಕವಿಯ ಮನೆತನ, ಜನನ, ಬಾಲ್ಯ, ಜೀವನ ಶಿಕ್ಷಣ, ಸಂಸಾರ, ಸಮಾಜ ಸೇವೆ, ಹಿರಿಯ ಸಾಹಿತಿಗಳ ಸಂಪರ್ಕ ಮುಂತಾದವರ ಬದುಕಿನ ವಿವಿಧ ಸಾಂಸ್ಕೃತಿಕ ಮಜಲುಗಳನ್ನು ಚಿತ್ರಿಸುವುದರೊಂದಿಗೆ ಅವರಿಗೆ ಸಂದ ಗೌರವ, ಪ್ರಶಸ್ತಿ, ಸನ್ಮಾನಗಳನ್ನು ಈ ಅಧ್ಯಾಯಗಳಲ್ಲಿ ನೀಡಲಾಗಿದೆ.

ಅಧ್ಯಯ – ಮೂರು

ಜಂಬುನಾಥ ಕಂಚ್ಯಾಣಿಯವರ ಸಾಹಿತ್ಯ ಸೃಷ್ಟಿ ಒಂದು ಸಮಗ್ರ ನೋಟ

ಜಂಬುನಾಥ ಕಂಚ್ಯಾಣಿಯವರ ಮಕ್ಕಳ ಸಾಹಿತ್ಯ – ಪ್ರೌಢ ಸಾಹಿತ್ಯ

ಈ ಅಧ್ಯಾಯವು ಮಹಾ ಪ್ರಭಂಧದ ಹೃದಯ ಭಾಗವಾಗಿದ್ದು ಅವರ ಹತ್ತು ಮಕ್ಕಳ ಕೃತಿಗಳನ್ನು ಸಮಗ್ರವಾಗಿ ವಿಶ್ಲೇಷಿಸಲಾಗಿದೆ. ಭಾರತ ದೇಶವೆಂಬುವದು ಗ್ರಾಮೀಣ ಸಾಂಸ್ಕೃತಿಯ ಸಾಮಗ್ರಿಗಳ ಮೇಲೆ ಆರಳಿದ. ಸೌಧ ಎಂಬುದು ಜಂಬುನಾಥರವರ ನಿಚ್ಚಳ ನಂಬಿಕೆ ಅವರು ಬಾಲ್ಯದಿಂದಲೂ ಗ್ರಾಮೀಣ ಬದುಕಿಗೆ, ಜನಪದ ಸಾಹಿತ್ಯಕ್ಕೆ ಮನಸೋತವರು ಹಳ್ಳಿಗಾಡು ಬದುಕಿನ ನೇರ ಅನುಭವ ಸಾಮಗ್ರಿಯೊಂದಿಗೆ ಜಂಬುನಾಥ ಅವರು ಬೆಳೆಸಿಕೊಂಡು ಬಂದ ಪ್ರೀತಿ ಕಾಳಜಿಗಳು ಇವರನ್ನು ಮಕ್ಕಳ ಸಾಹಿತಿ ಎನ್ನಾಗಿಸಿವೆ. ಜಂಬುನಾಥ ಕಂಚ್ಯಾಣಿಯವರು ಕವಿಯಾಗಿ, ಕಥೆಗಾರರಾಗಿ, ಜೊತೆಗೆ ಮಕ್ಕಳ ಸಾಹಿತ್ಯದಲ್ಲಿ ಅವರ ಅಪಾರ ಸೇವೆ ಏನೆಂಬುದನ್ನು ಅವರ ಮಕ್ಕಳ ಸಾಹಿತ್ಯ ಕೃತಿಗಳಿಂದ ಈ ಅಧ್ಯಾಯದಲ್ಲಿ ದಾಖಲಿಸಲಾಗಿದೆ: ಜಂಬುನಾಥ ಕಂಚ್ಯಾಣಿರವರ ಗ್ರಂಥಗಳಾದ ಕಾವ್ಯ, ಕಥೆ, ಕಾದಂಬರಿ, ಚರಿತ್ರ, ಹಾಗೂ ಅವರ ಸಂಪಾದನಾ ಕೃತಿಗಳು ಅಧ್ಯಯನ ಸಲುವಾಗಿ ಐದು ಅಧ್ಯಾಯಗಳಾಗಿ ಮಾಡಿಕೊಂಡು ಅಧ್ಯಾಯನ ನಡೆಸಲಾಗಿದೆ.

ಅಧ್ಯಾಯ – ನಾಲ್ಕು

೪.೧. ಜಂಬುನಾಥ ಕಂಚ್ಯಾಣಿಯವರ ಮಕ್ಕಳ ಕವಿತೆಗಳು

ಜಂಬುನಾಥ ಕಂಚ್ಯಾಣಿಅವರು ನಾಲ್ಕು ಶ್ರೇಷ್ಠ ಮಕ್ಕಳ ಕವನ ಸಂಕಲಗಳನ್ನು ಒಂದು ಶಿಶುಪ್ರಾಸ ಸಂಕಲನ ರಚಿಸಿದ್ದಾರೆ. ಇವರ ಪದ್ಯ ಸಾಹಿತ್ಯವನ್ನು ಸ್ಥೂಲವಾಗಿ ಶಿಶುಪ್ರಾಸಗಳು ಪರಿಸರ, ಮಳೆವರ್ಣನೆ, ವಿಜ್ಞಾನ, ಪ್ರಕೃತಿ, ಮಕ್ಕಳ ತುಂಟಾಟ ಹಾಗೂ ಕಥನಕವನಗಳಿಂದ ವಿಂಗಡಿಸಿ ಅಧ್ಯಾಯನ ಮಾಡಲಾಗಿದೆ.

ಜಂಬುನಾಥ ಕಂಚ್ಯಾಣಿಯವರು "ಅಂಬೇಗಾಲಿನ ಹೋರಿ" ಮಕ್ಕಳ ಕವನ ಸಂಕಲನವನ್ನು ನಾಡಿನ ಚಿಣ್ಣರ ಕೈಗಿಟ್ಟಿದ್ದಾರೆ. ಈ ಗ್ರಂಥ ೧೯೮೫ರಲ್ಲಿ ಭಾರತಿ ಸಾಹಿತಿ ಭಂಡಾರ ಬಿಜಾಪುರ ಇವರಿಂದ ಪ್ರಕಟಗೊಂಡಿದೆ. ಇದು ೧೮ ಮಕ್ಕಳ ಕವಿತೆಗಳನ್ನು ಮತ್ತು ೨೩ ಚಿತ್ರಗಳನ್ನು ಒಳಗೊಂಡಿದೆ.

ಇದಲ್ಲದೆ ೧೯೯೦ರಲ್ಲಿ ೨ನೇ ವರ್ಗದ ಪುಸ್ತಕ ಕನ್ನಡ ಭಾರತಿ ೨ ಕರ್ನಾಟಕ ಪಠ್ಯ ಪುಸ್ತಕದಲ್ಲಿ ಮುದ್ದಿನ ಕರು" ಕವನ ಸೇರ್ಪಡಗೊಂಡಿದ

"ನನ್ನಯ ಮುದ್ದಿನ ಆಕಳ ಕರುವು
ಸುಂದರ ಕಾಣುವುದು ತಿಂಗಳ ಬೆಳಕಿನ ಬಣ್ಣವ ತೊಟ್ಟು
ಬಳಕುತ ನಡೆಯುವುದು"

ಶಿಶುವಿಹಾರದ ಮಕ್ಕಳ ಪರಿಸರವನ್ನು ಗಮನಿಸಿ ಜಂಬುನಾಥ ಅವರು "ಚಲ್' ಚಲ್ ಕುದುರೆ" ಎಂಬ ಶಿಶುಪ್ರಾಸಗಳು ಸಂಕಲನ ಹೊರ ತಂದಿದ್ದಾರೆ. ಈ ಗ್ರಂಥ ೧೯೯೬ರಲ್ಲಿ ವಿಜಾಪುರ ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮದಿಂದ ಪ್ರಕಟಗೊಂಡಿದೆ. ಇದು ೩೯ ಶಿಶುಪ್ರಾಸಗಳನ್ನು ಒಳಗೊಂಡಿದ್ದು ಈ ಸಾಲಿನ ಪದ್ಯದಿಂದ ೧೦ ಸಾಲಿನವರೆಗಿನ ಶಿಶುಪ್ರಾಸಗಳಿವೆ.

ಜಂಬುನಾಥ ಅವರ 'ಪುಟ್ಟಿಯ ಗುಲಾಬಿ' ಕವನ ಸಂಕಲನವು ೨೦೦೨ರಲ್ಲಿ ವಿದ್ಯಾಚೇತನ ಪ್ರಕಾಶನ ಇವರಿಂದ ಪ್ರಕಟಗೊಂಡಿದೆ. ಹೊಸ ಹೊಸ ಭಾವ ಹಾಗೂ ವಸ್ತುವಿನಿಂದ ಕೂಡಿದ "ಪುಟ್ಟಿಯ ಗುಲಾಬಿ" ಯಲ್ಲಿನ ಎಲ್ಲಾ ಕವನಗಳು ಈಗಾಗಲೇ ಸುಧಾ, ಕರ್ಮವೀರ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಮತ್ತು ಪುಟಾಣಿ ವಿಜಯದಲ್ಲಿ ಪ್ರಕಟವಾಗಿದೆ.

ಮಲ್ಲಿಗೆ ಮಳೆಯು ಮಕ್ಕಳ ಮನಸ್ಸಿಗೆ ಹಿಡಿಸುವ ಖುಷಿಕೊಡುವ ವಸ್ತು ವಿಷಯಗಳನ್ನು ಹೊಂದಿವೆ. ಮಕ್ಕಳ ಕನಸು ಹಾಗೂ ಭಾವಗಳಿಗೆ ಹತ್ತಿರವಾದ ಕವಿತೆಗಳು ಇದರಲ್ಲಿವೆ, ಅವು ಮಕ್ಕಳನ್ನು ಹಾಡಿ ಕುಣಿಯಲು ಪ್ರೇರೇಪಿಸುತ್ತದೆ.

ಮಲ್ಲಿಗೆ ಮಳೆಯ ಗ್ರಂಥದ ಒಂದು ಕವನ ೧೯೯೮ರಲ್ಲಿ 'ಬಸವನ ಹುಳು ಕವಿತೆ ಮಹಾರಾಷ್ಟ್ರ ರಾಜ್ಯದ ಕನ್ನಡ ಎರಡನೆಯ ವರ್ಗದ ಪದ್ಯದಲ್ಲಿ

"ಬಸವನ ಹುಳುವ ಬಸವನ ಹುಳುವ
ಎಲ್ಲಿಗೆ ಹೊರಟಿವೆ? ಸದ್ದನು ಮಾಡದ
ಸುದ್ದಿಯ ಹರಡದ ಶಿವಳುತ ನಡೆದಿರುವ '
ಸೇರ್ಪಡೆಗೊಂಡಿದೆ.

ನಂದನವನ "ಪರಿಸರ ಗೀತೆಗಳು ಗ್ರಂಥದ ಕವಿತೆಗಳು ಪರಿಸರಕ್ಕೆ ಸಂಬಂಧಿಸಿವೆ ಜಂಬುನಾಥ ಅವರು ಮಕ್ಕಳ ಮನದೋಲವನ್ನರಿತವರಾಗಿದ್ದಾರೆ. ಅಂತೆಯೇ ಇವರ ಕವನಗಳು ಮನಸ್ಸನ್ನಾಕರ್ಷಿಸಲು ಶಕ್ತವಾಗಿವೆ. ಕವನಗಳು ನೇರ ಸರಳವಾದದು ಪ್ರಾಸ ಬದ್ಧವಾಗಿದೆ ಮಕ್ಕಳು ಹಾಡಿ ಕುಣಿಯಲು ಅಭಿನಯಿಸಿ ಆನಂದಿಸಲು ಯೋಗ್ಯವಾಗಿದೆ.

ಅಧ್ಯಾಯ – ಐದು

ಜಂಬುನಾಥ ಕಂಚ್ಯಾಣಿಯವರ ಮಕ್ಕಳ ಕಥಾಸಂಕಲನಗಳು ಮತ್ತು ಕಥನಕವನಗಳು

ಜಂಬುನಾಥ ಕಂಚ್ಯಾಣಿರವರ ಕಥಾ ಸಂಕಲನ 'ಸಾಹಸದ ಸಮುದ್ರ ಯಾತ್ರೆ" ಜಂಬುನಾಥ ಕಂಚ್ಯಾಣಿ ಅವರ ಉತ್ತಮ ಕಥಾ ಸಂಕಲನ, ಈ ಗ್ರಂಥವನ್ನು ಅಧ್ಯಯನ

ದೃಷ್ಟಿಯಿಂದ ಪ್ರಾಣಿ, ಪಕ್ಷಿರೂಪದ ಕಾಗಳು, ನೀತಿಕಥೆಗಳು, ವೈಜ್ಞಾನಿಕ ಕಥೆಗಳು, ವೈಚಾರಿಕ ಕಥೆಗಳು, ಮಕ್ಕಳಲ್ಲಿ ಒಲವು ಮೂಡಿಸುವ ಪ್ರಯತ್ನ ಮೂಡಿರುವದನ್ನು ಇಲ್ಲಿ ಗುರುತಿಸಲಾಗಿದೆ, ನಡೆ, ನುಡಿ, ಆಚಾರ ವಿಚಾರಗಳಲ್ಲಿ ಮಕ್ಕಳು ಒಳ್ಳೆಯದನ್ನು ಆಳವಡಿಸಿಕೊಳ್ಳುವ ಸಾಹಿತ್ಯ ನಿರ್ಮಾಣದಲ್ಲಿ ಸಾಕಷ್ಟು ಪ್ರಯತ್ನ ಮೂಡಿರುವದನ್ನು ಇಲ್ಲಿ ಕಾಣುತ್ತೇವೆ.

ಅಧ್ಯಾಯ – ಆರು
ಜಂಬುನಾಥ ಕಂಚ್ಯಾಣಿಯವರ ಮಕ್ಕಳ ಕಾದಂಬರಿಗಳು

ಈ ವಿಭಾಗದಲ್ಲಿ ಜಂಬುನಾಥ ಕಂಚ್ಯಾಣಿರವರು ಮಕ್ಕಳಿಗಾಗಿ ಎರಡು ಕಾದಂಬರಿಗಳನ್ನು ರಚಿಸಿದ್ದಾರೆ. ಇವರ ಎರಡು ಕಾದಂಬರಿಗಳನ್ನು ಅಧ್ಯಾಯನದ ದೃಷ್ಟಿಯಿಂದ ಕಾದಂಬರಿಗಳ ವಸ್ತು ವೈವಿಧ್ಯ, ವೈಶಿಷ್ಟ, ಮೌಲ್ಯಪ್ರಜ್ಞೆ ಜೊತೆಗೆ ವೈಜ್ಞಾನಿಕ ಸಾಮಾಜಿಕ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಮಕ್ಕಳ ಸಾಹಿತ್ಯದಲ್ಲಿ ಕವನ, ಕಥೆ, ನಾಟಕ, ಚರಿತ್ರ, ವಿನೋದ ಪ್ರಬಂಧ, ಹೀಗೆ ಅನೇಕ ಪ್ರಕಾರಗಳನ್ನು ಒಳಗೊಂಡ ಸಮೃದ್ಧ ಸಾಹಿತ್ಯವಾಗಿದೆ, ಇದರಲ್ಲಿ 'ಕಾದಂಬರಿ' ಪ್ರಕಾರವು ಒಂದು, ಮಕ್ಕಳ ಸಾಹಿತ್ಯದಲ್ಲಿ ಪ್ರೌಢ ಸಾಹಿತ್ಯದಷ್ಟು ಕಾದಂಬರಿ ಪ್ರಕಾರ ಬೆಳೆದಿಲ್ಲ. ಆದರೂ ಆಲಲ್ಲಿ ಆಂದರೆ ಡಾ॥ ಭೂಸನೂರ ಮಠ ಮತ್ತು ನಾ ಕಾದಂಬರಿ ರಚಿಸಿರುವುದನ್ನು ಕಾಣಬಹುದಾಗಿದೆ. ಜಂಬುನಾಥ ಕಂಚ್ಯಾಣಿಯವರು ಕಾದಂಬರಿ ಕ್ಷೇತ್ರದಲ್ಲಿ ಕೃಷಿ ಮಾಡಿದ ಕೆಲವು ಮಹಾನೀಯರಲ್ಲಿ ಒಬ್ಬರು.

'ಅಂತರೀಕ್ಷದಲ್ಲಿ ಪುಟಾಣಿಗಳು" ಜಂಬುನಾಥ ಕಂಚಾಣಿಯವರ ವೈಜ್ಞಾನಿಕ ಕಾದಂಬರಿ ಯಾಗಿದೆ ಈ ಗ್ರಂಥ ೧೯೯೪ರಲ್ಲಿ ವಿಜಾಪುರ ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮ ವಿಜಾಪುರ ಇವರಿಂದ ಪ್ರಕಟಗೊಂಡಿದೆ. ಫ.ಗು.ಸಿದ್ದಾಪುರ ಅವರು ಈ ಕೃತಿಯನ್ನು "ವಿಜ್ಞಾನ ವಿಷಯಗಳನ್ನು ಆಳವಡಿಸಿ ತಿಳಿಭಾಷೆಯಲ್ಲಿ ಬರೆದ ಕಿರು ಕಾದಂಬರಿ" ಎಂದು ಗುರುತಿಸಿದ್ದಾರೆ.

"ಮಿಡಿದ ಕರುಳು" ಕಾದಂಬರಿ ಇದು ೧೯೯೯ರಲ್ಲಿ ನಿರ್ಮಲ ಪ್ರಕಾಶನ ಪಡಿಯಲ್ಲಿ ಪ್ರಕಟಗೊಂಡಿದೆ. ಕಲಾವಿದರಾದ ಶ್ರೀ ಕೆ.ಬಿ.ಕುಲಕರ್ಣಿ ಆವರು ಸುಂದರವಾದ ಚಿತ್ರಗಳನ್ನು ಬಿಡಿಸಿದ್ದಾರೆ.

ಅಧ್ಯಾಯ – ಏಳು
ಜಂಬುನಾಥ ಕಂಚ್ಯಾಣಿಯವರ ವ್ಯಕ್ತಿ ಚಿತ್ರಗಳು ಮತ್ತು ಮಕ್ಕಳ ನಾಟಕ

ಮಕ್ಕಳ ಸಾಹಿತ್ಯದಲ್ಲಿ ಕಥೆ ಹಾಗೂ ಜೀವನ ಚರಿತ್ರೆಗಳು ಮಹತ್ವಪೂರ್ಣ ಸ್ಥಾನವಹಿಸುತ್ತವೆ. ಆದಕಾ ಅಂಬುನಾಥ ಕಂಚ್ಯಾಣಿರವರು ಮಕ್ಕಳಿಗಾಗಿ ಮಹಾಪುರುಷರ ಚಾರಿತ್ರ್ಯ, ತತ್ವ, ಆದರ್ಶಗಳನ್ನು ಮಕ್ಕಳ ಮನಮುಟ್ಟುವಂತೆ ಹೇಳಬೇಕು ಎಂದು ಈ ನಿಟ್ಟಿನಲ್ಲಿ ಮಕ್ಕಳಿಗಾಗಿ ಎರಡು ವ್ಯಕ್ತಿ ಚಿತ್ರಣಗಳನ್ನು ರ. ಭಾಗದಲ್ಲಿ ಅಧ್ಯಯನ ಮಾಡಲಾಗಿದೆ.

ವಿಭುತಿ ಮರುಷರ, ಸ್ವಾತಂತ್ರ್ಯ ಹೋರಾಟಗಾರರ, ರಾಜ ಮಹಾರಾಜರ ಜೀವನ ಚರಿತ್ರೆಗಳು ಮಕ್ಕಳ ನೈತಿಕ ಬಲವನ್ನು ಹೆಚ್ಚಿಸುತ್ತವೆ. ಹಿರಿಯರ ಆದರ್ಶ ಬದುಕು ಕಿರಿಯರಿಗೆ ದಾರಿ ದೀಪವಾಗಿ ನಾಗೆ ನಾಗರೀಕನಾಗಿ ಸಿದ್ಧಗೊಳಿಸುತ್ತವೆ. ಆದರಂತೆ ಪ್ರಬಂಧಗಳು ಮಕ್ಕಳಲ್ಲಿ ವಿಷಯ ಜ್ಞಾನವನ್ನು ವೃದ್ಧಿಗೊಳಿಸುತ್ತವೆ.

ಜಂಬುನಾಥ ಕಂಚ್ಯಾಣಿ' ಅವರ 'ಸಂತ ಏಕನಾಥ' ಇದು ೨೦೦೪ರಲ್ಲಿ ಶ್ರೀ ಪಾಂಡುರಂಗ ಪ್ರಕಾಶನ ಇವರಿಂದ ಪ್ರಕಟಗೊಂಡಿದೆ. ಸಂತ ಏಕನಾಥ ಇದು ಮುಳವಾಡ ಚಂದ್ರಕಾಂತ ಕಾಳ' ಎಂಬ ಸಂತರ ಒತ್ತಾಸೆಯಿಂದ ಮೂಡಿ ಬಂದ ಕೃತಿಯಾಗಿದೆ. ಶ್ರೀಮತಿ, ಸಾವಿತ್ರಿಬಾಯಿ ಖಾರರು 'ಭವಾನ್ಸ್ ಜರ್ನಲ್'ದಲ್ಲಿ ಬರೆದ ಲೇಖನದ ಭಾವಾನುವಾದವಾಗಿದೆ.

ಕಲ್ಯಾಣ ನಾಡಿನ ಶರಣ ಪರಿಷತ್ತು ಬೆಳ್ಳಿ ಹಬ್ಬದ ಕೊಡುಗೆಗಳಲ್ಲಿ ಜಂಬುನಾಥರ 'ಡೋಹರ ಕಕ್ಕಯ್ಯ' ಚರಿತ್ರೆಯೂ ಒಂದಾಗಿದೆ. ೧೨ನೇ ಶತಮಾನದಲ್ಲಿ ಎಲ್ಲ ಶರಣ –

ಶರಣೆಯರ ಬದುಕು ಹಾಗೂ ಆದರ್ಶಗಳನ್ನು ಇಂದಿನ ಮಕ್ಕಳಿಗೆ ಕೊಡುವ ಉದ್ದೇಶ, ಶರಣ ಪರಿಷತ್ತಿನದಾಗಿದೆ.

ಅಧ್ಯಾಯ–ಎಂಟು

ಜಂಬುನಾಥ ಕಂಚ್ಯಾಣಿ'ಯವರ ಇತರ ಸಾಹಿತ್ಯ ಕೃತಿಗಳು

ಈ ಅಧ್ಯಾಯದಲ್ಲಿ ಜಂಬುನಾಥ ಕಂಚ್ಯಾಣ' ಅವರ ಪ್ರಕಟಿತ ಸೃಜನಶೀಲ ಕೃತಿಗಳನ್ನು ವಿವೇಚಿಸಲಾಗಿದೆ.

'ಆವಿಭಾಗದಲ್ಲಿ 'ಹಸಿರುಗಿಡದ ಮ್ಯಾಲ ಮೊಸರ ಚೆಲ್ಲೆದ 'ಜಂಬುನಾಥ ಕಂಚ್ಯಾಣಿ' ಅವರ ಜಾನಪದ ಕಾರ್ಯದ ಮೊದಲ ಸಂಗ್ರಹವಿದು. ತಮ್ಮ ಭಾಗದ ಜನಪದ ಒಗಟುಗಳನ್ನು ಸಂಗ್ರಹಿಸಿ ಅವುಗಳನ್ನು ವಿಷಯಾನುಸಾರ ವಿಂಗಡಿಸಿ ಪ್ರಸ್ತುತ ಕೃತಿಗಳನ್ನು ಪ್ರಕಟಿಸಿದ್ದಾರೆ. ಈ ಕೃತಿಯನ್ನು ಜಾನಪದ ಹಿನ್ನೆಲೆಯಲ್ಲಿ ನೋಡಲಾಗಿದೆ, ಗ್ರಾಮ, ಗರತಿಯರ ದೈನಂದಿನ ಬದುಕು, ಕಷ್ಟ ಸುಖಗಳನ್ನು ಅಡಗಿಸಿಕೊಂಡಿರುವ ಈ ಒಗಟುಗಳು ಮತ್ತೆ ಮತ್ತೆ ಮೆಲುಕು ಹಾಕುವಂತಾಗುತ್ತವೆ. ಎಂಬುವದನ್ನು ತಿಳಿಸುತ್ತಾ ಸಂಕಲನದ ಮಹತ್ಮವು ವಿವೇಚನೆ, ಜಂಬುನಾಥ ಅವರ ಸಂಗ್ರಹದ ಮೌಲಿಕಥೆಯನ್ನು ಗುರುತಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

'ಬ' ವಿಭಾಗದಲ್ಲಿ, ಜಂಬುನಾಥ ಕಂಚ್ಯಾಣಿ' ಅವರ 'ವಸಂತಾಗಮನ' ಇದೊಂದು ಅಪರೂಪದ ಕನ್ನಡದಲ್ಲೇ ವಿಶಿಷ್ಟವಾದ ಕವನ ಸಂಕಲನವಾಗಿದೆ. ಕವಿಯ ಆಸೆ, ನಿರಾಸೆ, ವಿಷಾದ ಎಲ್ಲವೂ ಪ್ರಕಟಗೊಂಡಿರುವ ಸಂಕಲಸವಿದು, ಕೃತಿಯ ರಚನಾ ವಿನ್ಯಾಸಗಳ ಕುರಿತು ಈ ವಿಭಾಗದಲ್ಲಿ ಚರ್ಚಿಸಲಾಗಿದೆ.

'ಕ' ವಿಭಾಗದಲ್ಲಿ ಜಂಬುನಾಥ ಕಂಚ್ಯಾಣಿ ಅವರ ಚೌಪದಿಗಳ ಕುರಿತು ವಿಮರ್ಶಿಸಲಾಗಿದೆ ಅವರ ಪ್ರಕಟಿತ ಎರಡು ಚೌಪದಿಗಳಾದ ಭಾವಬಿಂಬಗಳ (ಚೌಪದಿಗಳು) ಮತ್ತು ಒಡಕಿಡಿಗಳು (ಪಡಿಗಳು ಜಂಬುನಾಥ ಅವರ ಆನಿಸಿಕೆ, ವಿಚಾರ, ಸ್ವಾನುಭಾವಗಳನ್ನು ಭಾವ ಕಮ್ಮಟ್ಟದಲ್ಲಿ ಮೂರ್ತಗೊಳಿಸಿ ಸಿದ್ಧಪಡಿಸಿದ್ದ ಚೌಪದಿಗಳು: ಈ ವಿಭಾಗದಲ್ಲಿ ಅಧ್ಯಯನ ಮಾಡಲಾಗಿದೆ.

'ಡ' ವಿಭಾಗದಲ್ಲಿ ಜಂಬುನಾಥ ಕಂಚ್ಯಾಣಿ ಅವರು ಪ್ರಕಟಿತ ಕಥಾ ಸಂಕಲನವನ್ನು ಚರ್ಚಿಸಲಾಗಿದೆ. ವಿಜಯ ಕರ್ನಾಟಕ, ಸಂಯುಕ್ತ ಕರ್ನಾಟಕ ಮುಂತಾದ ಗಣ್ಯ ಪತ್ರಿಕೆಗಳಲ್ಲಿ ಕಥೆಗಳು ಪ್ರಕಟಗೊಂಡಿವೆ. ಕಥೆಗಳು ಅಧ್ಯಯನಕ್ಕೊಳಪಡಿಸಿ ಅವುಗಳ ವಸ್ತು ವೈವಿಧ್ಯತೆ ಈ ವಿಭಾಗದಲ್ಲಿ ಅವಲೋಕಿಸಲಾಗಿದೆ.

ಸಮಾರೋಪ

ಈ ಅಧ್ಯಾಯದಲ್ಲಿ ಜಂಬುನಾಥ ಕಂಚ್ಯಾಣಿಯವರು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಮೂಡಿರುವ ಕೃಷಿಯ ಬೆಲೆ ಕಟ್ಟಲಾಗಿದೆ. ಇದು ಒಟ್ಟಾರೆ ಅಧ್ಯಾಯದ ರೂಪರೇಷವಾಗಿದೆ, ಅವರ ಸಾಹಿತ್ಯದ ಸತ್ಯ ಮಹತ್ವ ಮತ್ತು ಸಾಹಿತ್ಯದ ಪ್ರಸ್ತುತತೆ ಎಷ್ಟು ಎಂಬುದನ್ನು ವಿವೇಚಿಸಲಾಗಿದೆ. ಕೊನೆಯ ಅನುಬಂಧದಲ್ಲಿ ಜಂಬುನಾಥ ಕಂಚ್ಯಾಣಿಅವರ ವಂಶವೃಕ್ಷ ಜೀವನದ ಪ್ರಮುಖ ಘಟನೆಗಳು, ಸಾಹಿತ್ಯ ಕೃತಿಗಳು ಪುರಸ್ಕಾರಗಳು, ಹಸ್ತಾಕ್ಷರ ಭಾವಚಿತ್ರಗಳು, ಗ್ರಂಥಋಣ: ಪ್ರಶ್ನಾವಳಿ ಮಾದರಿ, ಮುಂತಾದ ವಿಷಯಗಳನ್ನು ಕೊಡಲಾಗಿದೆ. ಹೀಗೆ ೮ ಅಧ್ಯಾಯಗಳಲ್ಲಿ ಈ ಸಹಾಪ್ರಬಂಧವನ್ನು ಅಧ್ಯಯ ಮಾಡಲಾಗುತ್ತದೆ. ಈ ಮೂಲಕ ಉಪೇಕ್ಷೆಗೆ ಗುರಿಯಾದ ಮಕ್ಕಳ ಸಾಹಿತ್ಯಕ್ಕೆ ಮತ್ತು ಮಕ್ಕಳ ಸಾಹಿತಿಗೆ ಸಂಶೋಧನಾ ಕ್ಷೇತ್ರದಲ್ಲಿ ನ್ಯಾಯ ಒದಗಿಸಲು ಪ್ರಯತ್ನಿಸಲಾಗಿದೆ.

ಮಾರ್ಗದರ್ಶಕರು — ಸಂಶೋಧನಾ ವಿದ್ಯಾರ್ಥಿನಿ

ಪ್ರೊ. ಮಹೇಶ ಚಿಂತಾಮಣಿ — ಸತ್ಯಶೃತಿ. ಎಂ